**CW7/PW6-Ramegowda T**

**ಸಾಕ್ಷಿಯನ್ನು ದಿನಾಂಕಃ 17.06.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎನ್ ಆರ್ ಎನ್ ವಕೀಲರಿಂದಃ**

ಈ ಪ್ರಕರಣದಲ್ಲಿ ಪ್ರಥಮ ವರ್ತಮಾನ ವರದಿಯನ್ನು ನಾನೇ ದಾಖಲಿಸಿರುತ್ತೇನೆ ಎಂದರೆ ಸರಿ. ಅದೇ ರೀತಿ ತನಿಖೆ ನಡೆಸಿ ಅಂತಿಮ ವರದಿಯನ್ನು ಸಹ ನಾನೇ ಸಲ್ಲಿಸಿರುತ್ತೇನೆ ಎಂದರೆ ಸರಿ. ದಿನಾಂಕ 04.05.2023 ರಂದು ಮಧ್ಯಾಹ್ನ 2.30 ಗಂಟೆಗೆ ಚಾಸಾ 1 ರವರು ಠಾಣೆಗೆ ಬಂದು ದೂರನ್ನು ನೀಡಿರುತ್ತಾರೆ. ಚಾಸಾ 1 ರವರು ದೂರನ್ನು ನೀಡುವಾಗ ಅದರ ಜೊತೆಗೆ ಸದರಿ ಸರ್ವೆ ನಂಬರ್ ಆಸ್ತಿಯು ತನ್ನ ಹೆಸರಿನಲ್ಲಿ ಇರುವ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ಈ ಬಗ್ಗೆ ದೂರನ್ನು ಸ್ವೀಕರಿಸುವ ಸಮಯದಲ್ಲಿ ನಾನು ಚಾಸಾ 1 ರವರನ್ನು ವಿಚಾರಿಸಿ ಅವರು ಸದರಿ ಜಮೀನು ತನ್ನ ಮಾವನಿಗೆ ಸೇರಿದ್ದು ಅದರಲ್ಲಿ ನಾನು ಕಳೆದ ಸುಮಾರು 30 ವರ್ಷಗಳಿಂದ ವ್ಯವಸಾಯ ಮಾಡಿಕೊಂಡಿರುವುದಾಗಿ ತಿಳಿಸಿರುತ್ತಾರೆ. ಚಾಸಾ 1 ರವರಿಂದ ದೂರನ್ನು ಸ್ವೀಕರಿಸಿದ ನಂತರ ಅದನ್ನು ನಮ್ಮ ಮೇಲಾಧಿಕಾರಿಗಳಿಗೆ ತಿಳಿಸಿ ನಂತರ ಪ್ರಕರಣ ದಾಖಲಿಸಿರುತ್ತೇನೆ. ಚಾಸಾ 1 ಹೆಚ್ ಡಿ ಕೋಟೆಯಲ್ಲಿ ರಾಜಕೀಯವಾಗಿ ಗುರುತಿಸಿಕೊಂಡು ಪ್ರಭಾವ ವ್ಯಕ್ತಿಯಾಗಿರುತ್ತಾರೆ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ.ಮಹಜರ್ ಜರುಗಿಸುವ ಪೂರ್ವದಲ್ಲಿ ಸದರಿ ಸ್ಥಳದಲ್ಲಿದ್ದ ಚಾಸಾ 2 ಹಾಗೂ 3 ರವರಿಗೆ ಮಹಜರ್ ಗೆ ಸಾಕ್ಷಿಯಾಗುವಂತೆ ನೋಟಿಸ್ ನೀಡಿರುತ್ತೇನೆ. ಸದರಿ ಕೃತ್ಯ ಸ್ಥಳದ ಸರ್ವೆ ನಂ.166 ಆಗಿರುತ್ತದೆ. ಸದರಿ ನಿಪಿ 2ರ ಮಹಜರ್ ನಲ್ಲಿ ಕೃತ್ಯ ಸ್ಥಳದ ಸರ್ವೆ ನಂಬರ್ ಜಮೀನಿನ ಹಿಂದೆ ಆರೋಪಿಯ ಸರ್ವೆ ನಂ.166/9 ರ ಜಮೀನು ಎಂದು ಬರೆಸಿರುತ್ತೇನೆ ಎಂದರೆ ಸಾಕ್ಷಿಯು ಬರೆಸಿರುವುದು ನಿಜ ಅದನ್ನು ಒಟ್ಟುಗೂಡಿಸಿ ಈಗ ಅದು ಸರ್ವೆ ನಂ.166 ಆಗಿರುತ್ತದೆ ಎಂಬುದನ್ನು ಸಹ ಬರೆದಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ನೋಡಿರುತ್ತೇನೆ, ಅದರೆ ಅವುಗಳನ್ನು ಅಂತಿಮ ದೋಷಾರೋಪಣ ಪಟ್ಟಿಯ ಜೊತೆ ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿದಾರನನ್ನ ಠಾಣೆಯಲ್ಲಿ ವಿಚಾರಣೆ ಮಾಡುವ ಸಮಯದಲ್ಲಿ ನೋಡಿರುತ್ತೇನೆ. ಅದು ಚಾಸಾ 1 ರವರ ಬಳಿಯೇ ಇದ್ದಿರುತ್ತದೆ. ಸದರಿ ಮಹಜರ್ ನಲ್ಲಿ ಮಹಜರ್ ನಲ್ಲಿ ಆರೋಪಿ ಅತಿಕ್ರಮ ಪ್ರವೇಶ ಮಾಡಿ ಕಲ್ಲು ಕಂಬ ನೆಟ್ಟಿರುವುದಾಗಿ ಬರೆದಿರುತ್ತೇನೆ ಎಂದರೆ ಸರಿ. ನಾನು ತಿಳಿಸಿರುವಂತೆ ಆರೋಪಿ ಯಾವುದೇ ಕೃತ್ಯವನ್ನು ಎಸಗಿರುವುದಿಲ್ಲ ಬದಲಾಗಿ ಚಾಸಾ 1 ರವರು ರಾಜಕೀಯವಾಗಿ ಪ್ರಭಲ ವ್ಯಕ್ತಿಯಾಗಿದ್ದು, ನಾನು ಅವರ ಪ್ರಭಾವಕ್ಕೆ ಒಳಗಾಗಿ ಅವರು ನೀಡಿದ ಸುಳ್ಳು ದೂರಿನ ಆಧಾರದ ಮೇಲೆ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಅಲ್ಲದೇ ಯಾವುದೇಕೃತ್ಯ ನಡೆಯಲಾಯಿತು ಎಂದು ಹೇಳಲಾದ ಸ್ಥಳಕ್ಕೆ ಹೋಗಿ ಅಲ್ಲಿ ನಿಪಿ-2 ರಂತೆ ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ ಬದಲಾಗಿ ಸದರಿ ಮಹಜರ್ ಅನ್ನು ಚಾಸಾ 1 ರವರು ತಿಳಿಸಿದ ಮೇರೆಗೆ ಈ ಪ್ರಕರಣಕ್ಕೋಸ್ಕರ ಠಾಣೆಯಲ್ಲಿ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ಯಾವುದೇ ಸಾಕ್ಷಿದಾರರು ನನ್ನ ಮುಂದೇ ಹೇಳಿಕೆ

ನೀಡಿರುವುದಿಲ್ಲ ಬದಲಾಗಿ ಈ ಪ್ರಕರಣಕ್ಕೆ ಅನುಕೂಲವಾಗುವ ರೀತಿಯಲ್ಲಿ ಅವುಗಳನ್ನು ನಾನೇ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ತನಿಖೆ ಸಮಯದಲ್ಲಿ ಆರೋಪಿ ಯಾವುದೇ ಕೃತ್ಯ ಎಸಗಿಲ್ಲ ಎಂಬುದು ಕಂಡುಬಂದಾಗ್ಯೂ ಸಹ ಚಾಸಾ 1 ರವರ ಒತ್ತಡಕ್ಕೆ ಒಳಗಾಗಿ ಸುಳ್ಳು ತನಿಖೆ ನಡೆಸಿ ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**